116(4)

"SATYAVADI" Founded 1917 Regd. No. M. 1280

ಸತ್ಯವಾದಿ

(ಅಭಿಮಾನಿ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 20] ಸೋಮವಾರ 22—10—45 [ಬಿಡಿ ಪ್ರತಿ 3 ಪೈ

ಈ ವಾರದ ಭವಿಷ್ಯ

(ಓಂ ಜ್ಯೋತಿಷ್ಕರಿಂದ)

ಮೇಷ — ಆರೋಗ್ಯವೂ ಸಾಂಪತ್ತಿಕ ಸ್ಥಿತಿಯೂ ಚನ್ನಾಗಿರುತ್ತವೆ. ಮನಸ್ಸು ಉಲ್ಲಾಸದಿಂದ ಕೂಡಿರುತ್ತದೆ

ವೃಷಭ — ಉದ್ಯೋಗದಲ್ಲಿ ಜಯಶೀಲರಾಗುವಿರಿ. ನಿಮ್ಮ ಸ್ಥಿತಿಗತಿಗಳು ಉತ್ತಮ ಗೊಳ್ಳುವವು.

ಮಿಥುನ — ಸಾಂಪತ್ತಿಕ ಹಾಗೂ ಮಾನಸಿಕ ಸ್ಥಿತಿಗಳು ಉತ್ತಮವಿರುವುದಿಲ್ಲ. ಆರೋಗ್ಯ ಚನ್ನಾಗಿರುತ್ತದೆ.

ಕರ್ಕಾಟಕ — ಧನನಾಶ, ಆರೋಗ್ಯಹಾನಿ, ಮಾನಸಿಕ ದುಸ್ಥಿತಿ ಇವುಗಳ ಯೋಗವಿರುವಂತೆ ಕಾಣಬರುತ್ತದೆ. ಜಾಗ್ರತೆ.

ಸಿಂಹ — ಶಾರೀರಕ, ಆರ್ಥಿಕ ಸ್ಥಿತಿಯು ಉತ್ತಮವಿರುತ್ತದೆ. ಶತ್ರುಗಳನ್ನು ಜಯಿಸಲು ಅನುಕೂಲ ಕಾಲವು ಒದಗುತ್ತದೆ.

ಕನ್ಯಾ — ಶಾರೀರಿಕ ಇತ್ಯಾದಿಗಳು ಸರಿಯಿಲ್ಲವಾಗಿವೆ. ನಿಮಗೀವಾರ ಕಷ್ಟವೆಷ್ಟೆಂಬುದನ್ನು ಹೇಳಲಸಾಧ್ಯ.

ತುಲಾ — ಶಾರೀರಕ ಆರ್ಥಿಕ ಸ್ಥಿತಿಗಳು ಉತ್ತಮವಾಗಿರುತ್ತದೆ. ವ್ಯವಹಾರದಲ್ಲಿ ಅನುಕೂಲಗಳು ಒದಗುತ್ತದೆ

ವೃಶ್ಚಿಕ — ಶಾರೀರಕ ಸ್ಥಿತಿಯುತ್ತಮವಿರುವುದು; ಆರ್ಥಿಕಾನಾನುಕೂಲತೆ ಸ್ವಲ್ಪ. ಶತ್ರುಪೀಡೆ.

ಧನಸ್ಸು — ಶಾರೀರಾರ್ಥಿಕ್ಕೋದ್ಯೋಗಸ್ಥಿತಿಗಳು ಈ ವಾರ ಉತ್ತಮವಾಗಿರುತ್ತವೆ. ದೈವಭಕ್ತಿಯನ್ನು ಹೆಚ್ಚುವ್ಯದಿಸಿ.

ಮಕರ — ವ್ಯವಹಾರದಲ್ಲಿ ಕಷ್ಟಗಳು ಪ್ರಾಪ್ತವಾಗುತ್ತವೆ. ಆರ್ಥಿಕವಾಗಿ ಹಾನಿಯಾಗಬಹುದು. ಅದರೆ ವಿಷಯಗಳ ಕಡೆಗೆ ಮನಸ್ಸನ್ನು ಹೆಚ್ಚಾಗಿ ಪ್ರಸರಿಸದಿರುವುದು ಉತ್ತಮ.

ಕುಂಭ — ಶಾರೀರಕ ಸ್ಥಿತಿಯು ಉತ್ತಮವಾಗಿರುತ್ತದೆ. ವ್ಯವಹಾರಗಳಲ್ಲಿ ಅಡಚಣೆಗಳ ಭಯವುಂಟು.

ಮೀನ— ಆದಾಯ ಸ್ವಲ್ಪ. ವ್ಯಯ ಹೆಚ್ಚು. ಅದರೂ ಚಿಂತೆ ಮಾಡಬೇಡಿ. ಮುಂದೆ ಸೌಖ್ಯವುಂಟು. ಆರೋಗ್ಯವು ಚನ್ನಾಗಿರುತ್ತದೆ. ಮಾನಸಿಕವನ್ನು ಏಕಾಗ್ರತೆಗೊಳಿಸಲು ಸಾಧನಮಾಡಿರಿ. ನಿಮ್ಮ ಎಲ್ಲಾ ಕಷ್ಟಗಳಿಂದ ಪಾರಾಗುವಿರಿ.

ಮಿಠಾಯಿ ಅಂಗಡಿಗಳ ಹರತಾಳ !

ಹೊಸಹೊಸ ಸುದ್ದಿ

ಆರ್ಜಂಟೈನಾದಲ್ಲಿ ಸರಕಾರದ ಆಶ್ರಯದಲ್ಲಿ ಜರ್ಮನರು ಅಣುಬಾಂಬಿನ ಸಂಬಂಧದ ಪರಿಶೋಧನೆ ಕಾರ್ಯ ನಡೆಸುತ್ತಿರುವರೆಂದು ರಯೋಡಿ ಜನೀರೋದ ಪತ್ರಿಕಾ ಪ್ರಕಟಣಕಾರನು ಕತೆ ಹುಟ್ಟಿಸಿರುವನೆಂದು ತಿಳಿಯಬಂದಿವೆ.

ಯೂರೋಪಿನ ಸ್ವಾಸ್ಥ್ಯದಲ್ಲಿ ರಷ್ಯ ಮತ್ತು ಪಾಶ್ಚಾತ್ಯ ಮಿತ್ರರಲ್ಲಿ ತೀಕ್ಷ್ಣಟತೆ ತೀವ್ರಗೊಳ್ಳುತ್ತಿದೆಯೆಂದೂ, ಎರಡು ಕಡೆಗಳಲ್ಲೂ ಸೈನ್ಯಶೇಖರಣೆಯಾಗುತ್ತಿರುವುದೆಂದೂ ಟಂಡನ್ನಿನ ವಾರ್ತೆ.

ನ್ಯೂ ಡೆಲ್ಲಿ ಅ 20— ಇಲ್ಲಿಗೆ ಬಂದ ವಾರ್ತೆಯಂತೆ ಆಜಾದ್ ಹಿಂದ್ ಲೀಗ್ ಮತ್ತು ಇಂಡಿಯನ್ ನ್ಯಾಷನಲ್ ಆರ್ಮಿ ಲಕ್ಷ್ಮಗಟ್ಟಂ ಕೋಟಿಗಟ್ಟಲೆ ಋಣ ಶೇಖರಣೆಯಾಗುತ್ತಿತ್ತಂತೆ. ಸುಭಾಷರ 3-4 ಗಂಟೆಗಳ ಕಾಲ ಮಾತಾಡುತ್ತಿದ್ದರಂತೆ ಹಾರಹಾಕಲಾಗುತ್ತಿತ್ತಂತೆ.

1948 ರಲ್ಲಿ ಭಾರತವು ಸ್ವತಂತ್ರವಾಗುವುದನ್ನು ನಾವು ನೋಡುತ್ತೇವೆ, ಎಂದು ಶ್ರೀ ಶಂಕರರಾವ್ ದೇವರು ಕೊಲ್ಲಾಪುರದಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿರುತ್ತಾರೆ.

ಬೆಜವಾಡ, ಮಚಲೀಪಟ್ಟಣ ಮೊದಲಾದ ಕಡೆ ಸುಂಟರಗಾಳಿಯಿಂದ ತುಂಬಾ ನಷ್ಟವಾಗಿದೆ.

ಈ ವರ್ಷಾಂತ್ಯದಲ್ಲಿ ಭಾರತಕ್ಕೆ ಬರ್ಮಾ ಅಕ್ಕಿ ಬರುವ ನಿರೀಕ್ಷಣೆಯಿದೆ.

ತಾ || 23-10-45 ನೇ ಮಂಗಳವಾರ ಸಂಜೆ ಗುಬ್ಬಿ ಕಂಪೆನಿಯವರು ರಾಟ್ ಧಾನಿಯಲ್ಲಿನ ತಮ್ಮ ಧನಲಕ್ಷ್ಮಿ ನಾಟಕವನ್ನಂಗಿರದಲ್ಲಿ 'ಕರುಣೋತ್ಪತ್ತಿ' ನಾಟಕವನ್ನಾಡಿ, ರಾಜಧಾನಿ ಅರಾಧ್ಯ ಹಾಸ್ಪಲ್ ಕಟ್ಟಡದ ಫಂಡಿಗೆ ಕೊಡವರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ಪ್ರಜಾಪ್ರತಿನಿಧಿ ಸಭೆ

ಮೈಸೂರು, ಅ 22 — ಈ ದಿವಸ 12—10 ಕ್ಕೆ ದಿವಾನರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಪ್ರೇಕ್ಷಕರು ಅಧಿಕ ಸಂಖ್ಯಾತರಾಗಿರಲಿಲ್ಲ. ಪ್ರಶ್ನೋತ್ತರಗಳಿಂದ ಸಭೆ ಆರಂಭವಾಯಿತು.

ಶ್ರೀಮತ್ ಬಿ ಆರ್. ರಾಮಯ್ಯನವರ ಪ್ರಶ್ನೆಗೆ ಶ್ರೀ ಮಲ್ಲಾರಾಧ್ಯರು ಉತ್ತರಕೊಡುತ್ತಾ 44—45 ರಲ್ಲಿ ಹಾಸನ ಡಿಸ್ಟ್ರಿಕ್ಟಿನಲ್ಲಿ 138 ಈ.ಸಿ.ಪಿ ಎಸ್.ಗಳೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ 243 ಈ.ಸಿ.ಪಿ.ಎಸ್.ಗಳೂ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ 189 ಈ.ಸಿ.ಪಿ.ಎಸ್.ಗಳೂ ಬಂದಿದೆಯೆಂದು ತಿಳಿಸಿದರು. ಈ ಸ್ಥಳಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸುವುದು ವೈಸ್‌ಚಾನ್ಸಲರಿಗೆ ಸಂಬಂಧಿಸಿದ್ದೆಂದೂ ಅವರಿಂದ ವಂದಿಯೇನೂ ಬಂದಿಲ್ಲವೆಂದೂ ಇದಕ್ಕೆ ಎರಡು ಲಕ್ಷ ರೂಪಾಯಿಗಳು ಮತ್ತು ಪ್ರತಿವರ್ಷವೂ ಐವತ್ತು ಸಾವಿರ ರೂಪಾಯಿಗಳು ಆವಶ್ಯವೆಂದು ತಿಳಿಸಿದರು. ಇದರ ವಿಷಯವಾಗಿ ಸರ್ಕಾರಯಾವ ನಿರ್ದಿಷ್ಟಕಾರ್ಯವನ್ನೂ ಕೈಗೊಂಡಿಲ್ಲವೆಂದೂ ತಿಳಿಸಿದರು.

ಶ್ರೀ ನಾಡಿಗ ನಂಜಪ್ಪನವರ ಪ್ರಶ್ನೆಗೆ ಶ್ರೀ ಮಲ್ಲಾರಾಧ್ಯರು ಉತ್ತರಕೊಡುತ್ತಾ ಸಂಸ್ಥಾನದಲ್ಲಿ 385 ನವೀನ ಮಾದರಿಯ ಮಾಧ್ಯಮಿಕ ಶಾಲೆಗಳಿರುವುದೆಂದೂ, ಇದರ ಅಡಳಿತವನ್ನು ಅಸಿಸ್ಟೆಂಟ್ ಇನ್‌ಸ್ಪೆಕ್ಟರ್ಸ್ ಆಫ್ ಎಜುಕೇಷನ್‌ರವರು ನೋಡಿಕೊಳ್ಳುತ್ತಿರುವರೆಂದೂ ತಿಳಿಸಿದರು ಅದಿಕರ್ನಾಟಕರಿಗೆ ಎಷ್ಟು ಶಾಲೆಗಳಿವೆ ಎಂಬ ಪ್ರಶ್ನೆಗೆ ವಿಂಗಡಿಸಿಲ್ಲವೆಂಬುದಾಗಿ ಉತ್ತರವಿಂದಿತು.

ಹಕ್ಕಭಾದ್ಯತೆ ವರದಿ ಬಗ್ಗೆ ಶ್ರೀ ಭೂಪಾಳಂರು ಸಮಿತಿಯ ವರದಿಯನ್ನು ಒಪ್ಪಿದರು. ಶ್ರೀ ಪಾವ್ಗಡ ನಂಜುಂಡರಾಯರು ತೀವ್ರವಾಗಿ ವಿರೋಧ ಮಾಡಿದರು. ಚರ್ಚೆ ಮುಂದುವರಿಯುತ್ತದೆ.

ನಾಳೆ ದಿವಸ ಬೆಳಿಗ್ಗೆ ಸಭೆ ಸೇರುತ್ತೆ.

ಅಮೇರಿಕ ಬ್ರಿಟನ್ನಿಗೆ ಕೊಡಬೇಕಿರುವ ಐದು ಬಿಲಿಯ ಡಾಲರ ಸಾಲದಲ್ಲಿ ಭಾರತಕ್ಕೆ ಸಾವಿರ ಮಿಲಿಯ ಡಾಲರ ಸಿಕ್ಕಿ ಅಮೇರಿಕಾದಿಂದ ಸಾಮಾನು ಸರಪರಾಜುಗಳನ್ನು ಪಡೆಯಲು ಅನುಕೂಲವಾಗಬಹುದೆಂದು ವಾಷಿಂಗ್ಟನ್‌ನಲ್ಲಿ ನಡೆಯುತ್ತಿರುವ ಸರ್ಕಾರಿ ಮಾತುಕತೆಗಳಿಂದ ತಿಳಿಯಲಾಗಿದೆ.

ಅಣು ಬಾಂಬುಗಳನ್ನು ರಷ್ಯಾ ಅಮೇರಿಕಾಕ್ಕಿಂತ ಕಡಿಮೆ ಖರ್ಚಿನಲ್ಲಿ ತಯಾರಿಸಬಲ್ಲುದೆಂದೂ, ಆದರೆ ರಷ್ಯಾಕ್ಕೆ ಈ ಬಾಂಬುಗಳನ್ನು ಎಲ್ಲೂ ಪ್ರಯೋಗಿಸಲು ಇಚ್ಛೆಯಿಲ್ಲವಾದ್ದರಿಂದ ಈ ಬಾಂಬುಗಳ ವಿಕಯದಲ್ಲಿ ಯೋಜನಾ ಪರರಾಗಿಲ್ಲವೆಂದೂ ಹೇಳಲಾಗಿದೆ.

ಸೇಲಮ್ಮಿನ ಗೋಗಾಲ್‌ನಲ್ಲಿರುವ ದೇವಾಲಯದಲ್ಲಿಯ ಇಸ್ಪತ್ತೈದು ಸಾವಿರ ರೂ ಬೆಲೆ ಬಾಳುವ ಚಿನ್ನ ಬೆಳ್ಳಿ, ವಜ್ರ ರತ್ನಗಳ ಒಡವೆಗಳೂ ರೇಷ್ಮೆ ಬಟ್ಟೆ ಮುಂತಾಡವು ಕಳುವಾಗಿದ್ದ ಬಗ್ಗೆ ಏಳು ದಸ್ತಗಿರಿಗಳಾಗಿವೆ.

ಮಿಠಾಯಿ ಮಾರುವವರು ಬೆಲೆ ನಿಗದಿ ಮಾಡಿ ಅಂಗಡಿ ಮುಂದೆ ಒಂದು ಪಟ್ಟಿಯು ಹಾಕಬೇಕೆಂದು ಆಹಾರ ಅಧಿಕಾರಿಗಳು ಆಜ್ಞೆ ಹೊರಡಿಸಿರುವುದರಿಂದ ಅದನ್ನು ಪ್ರತಿಭಟಿಸುವ ಸಲುವಾಗಿ ಅಲಹಾಬಾದಿನ ಮಿಠಾಯಿ ವ್ಯಾಪಾರಿ ಸಂಘವು ನಾಳೆಯ 19 ರಿಂದ ನವೆಂಬರ್ 10 ರ ವರೆಗೆ ಹರತಾಳ ಆಚರಿಸಲು ತೀರ್ಮಾನಿಸಿರುವುದರಿಂದ ಏಂಟಾಳಿಗೆ ಸೊನ್ನೆ ಬಿದ್ದಿದೆ.

ಮೈಸೂರು ಪತ್ರಿಕೋದ್ಯೋಗಿ ಸಂಘದ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ ಪಿ ಆರ್. ರಾಮಯ್ಯನವರು ಗುಬ್ಬಿ ಕಂಪೆನಿಯ ವಜ್ರೋತ್ಸವ ನಿಧಿಗೆ ನೂರು ರೂಪಾಯಿಗಳನ್ನು ಉದಾರ ದಾನ ಮಾಡಿರುವರು.

ನಿನ್ನೆಯ ದಿವಸ ಸಂಜೆ ಮೈಸೂರು ಹೊಸ್ಪಳ ಕರ್ನಾಟಕ ಮಹಾಸಭೆಯು ಸಹಕಾರಿ ಸಂಘ ಭವನದಲ್ಲಿ ಶ್ರೀ ಜಿ. ಕೃಷ್ಣಸ್ವಾಮಿರವರ ಅಧ್ಯಕ್ಷತೆಯಲ್ಲಿ ನಡೆದಿರುವುದಾಗಿ ತಿಳಿಯಬಂದಿದೆ.

ದಸರಾ ವಸ್ತುಪ್ರದರ್ಶನವು ನಾಳೆಯ ದಿವಸ ಮುಕ್ತಾಯವಾಗುವುದು.

ಮೈಸೂರು ಅಭಿವೃದ್ಧಿ ಸಮಿತಿಯ ಸಭೆಯು ಇಂದು ಸಂಜೆ 5 ಗಂಟೆಗೆ ಸೇರಲಿದೆ.

ಅಸ್ತಿ-ಭಾರ ಸಮಾರಂಭ

ಮೈಸೂರು, ಅ 22 — ವಿದ್ಯಾ ವಿತ್ತು ಆರೋಗ್ಯ ಸಚಿವರಾದ ಡಾ॥ ಟಿ ಸಿ.ಎಂ.ರಾಯರ್ ರವರು ಬಡಸರಿಗಾಗಿ ಹತ್ತು ಮನೆಗಳನ್ನು ಕಟ್ಟಲು, ಸವಜ್ಯೋತಿ ಸ್ಟೂಡಿಯೋವಿನ ವ್ಯವಸ್ಥಾಪಕರಾದ ಶ್ರೀ ಜಿ ಆರ್. ರಾವ ಯ್ಯನವರಿಂದ ಉದಾರದಾನವಾಗಿ ಕೊಡಲ್ಪಟ್ಟಿರುವ ಚಾಮುಂಡಿಪುರಂನಲ್ಲಿರುವ ಮಾಡಲ್ ಅಗ್ರಹಾರದ ಅಸ್ತಿಭಾರ ಮಹೋತ್ಸವವನ್ನು ಮೊನ್ನೆ ದಿನದ ಸಂಜೆ ಆರೂವರೆ ಘಂಟೆಯಲ್ಲಿ ತಮ್ಮ ಅನ್ಯತಹಸ್ತದಿಂದ ನೆರವೇರಿಸಿದರು.

ದ್ವಿತೀಯ ವಾರ್ಷಿಕೋತ್ಸವ

ನಿನ್ನೆಯ ದಿವಸ ಸಂಜೆ ದ್ವಿತೀಯ ವಾರ್ಷಿಕೋತ್ಸವ ಸಂಬಂಧವಾಗಿ ಮೈಸೂರು ಬಟ್ಟೆ ವ್ಯಾಪಾರಿ ಸಂಘದವರು ಆಹಾರ ಸಚಿವರಾದ ಶ್ರೀ ಪರೀಫರನ್ನು ಬರಮಾಡಿಕೊಂಡು ಶ್ರೀ ಚಾವುಂಡೇಶ್ವರಿ ಭವನದಲ್ಲಿ ಸತ್ಕರಿಸಿದರು. ವಂದಿಯನ್ನು ವಂದಿಸುತ್ತಾ, ಸಂಘದವರು ಕಾರ್ಯದರ್ಶಿಗಳ ಸೇವೆಯನ್ನೂ ಮತ್ತು ಉಪಕಾರ್ಯದರ್ಶಿಗಳಾದ ಶ್ರೀ ಶ್ರೀನಿವಾಸಾಯರ ಸೇವೆಯನ್ನೂ ಮುಕ್ತಕಂಠದಿಂದ ಪ್ರಶಂಸಿಸಿದರು.

ಸತ್ಕಾರ ಕೂಟಗಳು

ಮೊನ್ನೆಯ ದಿವಸ ಸಂಜೆ ಎಂಟು ಘಂಟೆಯಲ್ಲಿ ಟ್ರಿನಿಟಿ ಮ್ಯೂಚುವೆಲ್ ಅಷೂರೆನ್ಸ್ ಕಂಪೆನಿಯ ವ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಎಸ್.ಪಿ.ನಾಡ್ಕರ್ಣಿ ಮತ್ತು ಫೀಲ್ಡ್ ಡೈರೆಕ್ಟರ್ ಇನ್ ಚಾರ್ಜ್‌ರಾದ ಶ್ರೀ ಎ.ಜಿ.ಡಿಸಿಲ್ವರವರೂ ಟ್ರಿನಿಟಿ ಮ್ಯೂಚುವೆಲ್ ಹೆಲ್ತ್ ಕ್ಲಿಕ್‌ನ ಶುಭಾರಂಭಕ್ಕಾಗಿ, ವಿದ್ಯಾ ಮತ್ತು ಆರೋಗ್ಯ ಮಂತ್ರಿಗಳಾದ ಡಾ॥ಟಿ. ಸಿ.ಎಂ ರಾಯರವರ ಅಧ್ಯಕ್ಷತೆಯಲ್ಲಿ ಸತ್ಕಾರಕೂಟವೊಂದನ್ನು ಏರ್ಪಾಡು ಮಾಡಿದ್ದರು.

ಂ ಂ

ನಿನ್ನೆಯ ದಿವಸ ಬೆಳಿಗ್ಗೆ ಗುಬ್ಬಿ ವಜ್ರೋತ್ಸವ ಸಂಸ್ಥೆಯವರು ವೃತ್ತಪತ್ರಿಕಾ ಪ್ರತಿನಿಧಿಗಳನ್ನು ಬರಮಾಡಿಕೊಂಡು ಸತ್ಕಾರದ ಸಹಕಾರವನ್ನು ಕೋರಿದರು ಶ್ರೀ ಸುಬ್ಬರಾಯರ ಸಹಾಯವನ್ನು ಕುರಿತು ಎಲ್ಲರೂ ಪ್ರಶಂಸಿಸಿದರು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಒಂಗ್ಲಾ ಸೈಟುಗಳನ್ನು ತಾರೀಖು 12-9-1945 ನೇ ಹರಾಜು ಇಸ್ತಿಹಾರ್‌ನಾಮೆಯ ಷರತ್ತು ಪ್ರಕಾರ ತಾರೀಖು 20-10-1945 ರಿಂದ 23-10-1945 ರ ವರೆಗೆ ಸೈಟುಗಳ ಬಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವ್ಯಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು.

ಸತ್ಯವಾದಿ
ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಿ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು



ಆಮಶಂಕೆ
ಅತಿಸಾರಗಳಿಗೆ
.... ಖಾತ್ರಿ ....
ಗುಣಕಾರಿಯಾದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರನ್ನೆ ಬೀದಿ, ಮೈಸೂರು.

At Ranjit
Humayun
6 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹನ್
ನೀನಾ, ನರ್ಗಿಸ್,, ಜಾನಕಿವಾಸ್
ಪಾತ್ರವಹಿಸಿರುವರು

AT Opera—
2 nd Week
ರಂಜಿತ್, ಟಿ ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ
ಶಾಲಿವಾಹನ
(ತಮಿಳು)
Morning Shows
From 19-10-45
Hit Parade of 1943

ಕಳೆದವಾರ

ಕಾಶಿ— ಕಾಂಗ್ರೆಸ್ಸಿಗೇ ಓಟು ಕೊಡಿರೆಂದು ಪಂ || ಮದನ ಮೋಹನ ಮಾಳವ್ಯರವರು ಜನರನ್ನು ಪ್ರಾರ್ಥಿಸಿದಾರೆ.

ಂ ಂ

ಪಂ || ಜವಹರಲಾಲರು ಅಜಮಾಗರ್ ನಗರದಲ್ಲಿ ಮಾಡಿದ ಭಾಷಣವನ್ನು ಕೇಳಲು 8 ಸಾವಿರ ಜನರು ಸೇರಿದ್ದರಂತೆ. ಈ ಪೈಕಿ ಒಹು ಪಂದಿ ಮುಸ್ಲಿಮರೂ ಇದ್ದರು. ಶ್ರೀ ನೆಹರೂರವರಿಗೆ ಅತ್ಯಂತ ಕಡಿಮೆ ಪ್ರವಾಸದಲ್ಲಿ ನಿಧಿಗಳು ಅರ್ಪಿಸಲಾಗುತ್ತಿವೆ.

ಂ ಂ

ಸ್ವೀಡಿಷ್ ಅಕಾಡಮಿಯ ಅಟೋ ಹಾನ ಹೆಸರಿನ ಅಟಂಬಾಂಬಿನ ಜರ್ಮನ್ ಸಂಶೋಧಕನಿಗೆ 1944 ರಲ್ಲಿಯ ಕೆಮಿಸ್ಟ್ರಿ (ರಸಾಯನ ಶಾಸ್ತ್ರ) ಬಗ್ಗೆ ಇಟ್ಟ ನೋಬೆಲ್ ಬಹುಮಾನವನ್ನು ಕೊಡುವುದಾಗಿ ಘೋಷಣೆ ಮಾಡಿದ್ದಾರೆ. ಇವನು ಈಗ ಆಸ್ಟ್ರೀರಿಕಾದಲ್ಲಿ ಇರುವನೆಂದು ಹೇಳಲಾಗಿದೆ.

ಂ ಂ

ಬೆಲ್ಜಿಕ್ ಶಿಬಿರದಲ್ಲಿ ಮಿಲಿಟರಿ ಅಧಿಕಾರಿಗಳ ದುರ್ವರ್ತನೆಯನ್ನು ಖಂಡಿಸಲು 12 ಸಾವಿರ ಮಂದಿ ಖೈದಿಗಳು ಅನ್ನ ಸತ್ಯಾಗ್ರಹ ಮಾಡಿದರು.

ಂ ಂ

ಫ್ಯಾಲಿಸ್ಟೈನ್— ಯುದ್ಧ ಸಾಮಗ್ರಿಗಳನ್ನು ಒಯ್ಯುತ್ತಿದ್ದ ಬ್ರಿಟಿಷ್ ಟ್ರಕ್ ಒಂದನ್ನು ತಡೆಯಲು ಯಹೂದ್ಯರು ಮಾಡಿದ ಪ್ರಯತ್ನವು ವಿಫಲವಾಯಿತು.

ಂ ಂ

ಹುಗ್ಲಿ ಜಿಲ್ಲೆಯ ಚಿನ್ಸುರಾ ಎಂಬಲ್ಲಿಯ ರತನ ಸಾಧುಖಾನನೆಂಬ ಒಬ್ಬ ಶರಣನು ತನಗೆ ಬಟ್ಟೆ ಕೊಂಡುಕೊಳ್ಳಲು ಪರಮಿಟ್ ಸಿಕ್ಕಲಿಲ್ಲವೆಂದು ಆತ್ಮಹತ್ಯದ ಪ್ರಯತ್ನ ಮಾಡಿದನ. ಅಲ್ಲಿಯ ಮ್ಯಾಜಿಸ್ಟ್ರೇಟರು ಅವನಿಗೆ ಎಚ್ಚರಿಕೆ ಕೊಟ್ಟ ಬಿಟ್ಟಬಿಟ್ಟರಂತೆ ತನ್ನ ತಾಯಿಗೆ ಒಟ್ಟೆ ಇಲ್ಲದ್ದರಿಂದ ಎಷ್ಟು ಪ್ರಯತ್ನಮಾಡಿದರೂ ಅದು ವ್ಯರ್ಥವಾಯಿತೆಂದು ತಿಳಿದು ನಿರಾಶೆಯಾಗಿ ಆತ್ಮಹತ್ಯ ಮಾಡಿಕೊಳ್ಳಲು ನಿರ್ಧರಿಸಿ ಅಫೀಮನ್ನು ತಿಂದು ಒಂದು ಶಾಲೆಯ ಹತ್ತಿರ ಬಿದ್ದಿದ್ದನಂತೆ. ಅವನನ್ನು ಆಸ್ಪತ್ರೆಗೆ ಹಾಕಿ ಗುಣ ಹೊಂದಿದ ಮೇಲೆ ಅವನನ್ನು ವಿಚಾರಣೆಗೆ ಒಳಪಡಿಸಲಾಗಿದ್ದಿತು.

ಚೀನಾದ ನಾರ್ಕಿಂಗ್ ಪ್ರಾಂತ್ಯದ ಇಲ್ಲಿಯು ಗೌರ್ನರ್ (ವಾರ್ ಲಾರ್ಡ್) ರನ್ನು ಕೇಂದ್ರ ಸರಕಾರವು ಬರಕಾಸ್ತು ಮಾಡಿದ್ದರಿಂದ ಅಲ್ಲಿ ಕಮ್ಯೂನಿಸ್ಟು ಇವರಿಗೂ ಕಮ್ಯೂನಿಸ್ಟು ಸೈನ್ಯಕ್ಕೂ ಕೈಕೈ ಹತ್ತಿ ಅಂತಃಕಲಹಕ್ಕೆ ಪ್ರಾರಂಭವಾಗಿದೆ.

—....

ಈ ತಿಂಗಳಿಂದ ಸಿಲೋನಿನಲ್ಲಿ ಎಲ್ಲ ಶಾಲೆಗಳಲ್ಲಿಯೂ ಧರ್ಮಾರ್ಥ ಶಿಕ್ಷಣವು ಜಾರಿಗೆ ಬಂದಿತು. ಪ್ರಥಮ ದರ್ಜೆಯಿಂದ ಪಶ್ಚವಿದ್ಯಾನಿಲಯದವರೆಗೆ ಎಲ್ಲ ಜನರಿಗೂ ಶಿಕ್ಷಣವು ಧರ್ಮಾರ್ಥವಾಗಿ ಕೊಡಲ್ಪಡುವುದು.

.....,

ಅಣು ಬಾಂಬಿನ ವಿರುದ್ಧವಾವುದೂ ಇಲ್ಲವೆಂದು ದಾಷಿಂಗ್ಟನ್ನಿನ ವಾರ್ತೆ.

.....

ಅಣು ಬಾಂಬು ತಯಾರಿಸಲು ಅಮೆರಿಕಾ ವಿನಃ ಮತ್ತ್ಯಾವ ದೇಶದಲ್ಲೂ ಉತ್ಕೃಷ್ಟವಾದ ಕಾರ್ಖಾನೆಯಿಲ್ಲವೆಂದು ವಾಷಿಂಗ್ಟನ್ ವಾರ್ತೆ.

.....

ಅಟಂ ಬಾಂಬು ಪರಿಶೋಧನೆ ಕಾರ್ಯಕ್ಕಾಗಿ ಇಂಗ್ಲೆಂಡು 2 ಕೋಟಿ ಪೌಂಡುಗಳನ್ನೂ ಮತ್ತು ಅಮೇರಿಕಾವು 2 ಆರ್ಬುದ ಡಾಲರುಗಳನ್ನು ಖರ್ಚು ಮಾಡಿವೆಯಂತೆ.

.....

ಅಟಂ ಬಾಂಬಿನ ರಕ್ಷಣ ಹೊಂದಲು ಕೆಲ ದೇಶಗಳಲ್ಲಿ ಈಗಿನಿಂದಲೇ ಭೂಗರ್ಭಿತ ಪಟ್ಟಣಗಳನ್ನು ನಿರ್ಮಾಣ ಮಾಡಲು ಪ್ರಯತ್ನಗಳು ನಡೆಯುತ್ತಲಿವೆ.

——

ಮೈಸೂರಿನಲ್ಲಿ ಕಳೆದವಾರ ನಡೆದ ಪ್ರಜಾಪಕ್ಷ ಸಮ್ಮೇಳನದಲ್ಲಿ ಅಧ್ಯಕ್ಷರಾಗಿದ್ದ ಅಖಿಲ ಭಾರತ ನಿಮ್ನವರ್ಗ ಫೆಡರೇಷನ್ನಿನ ಅಧ್ಯಕ್ಷರಾದ ರಾವ್ ಬಹದ್ದೂರ್ ಶಿವರಾಜ್‌ರವರು ಮಾಡಿದ ಭಾಷಣದಲ್ಲಿ ಬ್ರಾಹ್ಮಣರ ಮೇಲೆ, ಗಾಂಧೀಜಿ ಮೇಲೆ ಮೈಸೂರು ಕಾಂಗ್ರೆಸ್ ಮೇಲೆ ಟೀಕು ಜೋರಾಗಿದೆ. ಬ್ರಾಹ್ಮಣೇತರರು ಬ್ರಾಹ್ಮಣರೊಡನೆ ಬಹುವಾಗಿ ಹೋರಾಡಬೇಕೆಂದೂ, ಬ್ರಾಹ್ಮಣರ ಹಿಡಿತದಿಂದ ತಪ್ಪಿಸಿಕೊಳ್ಳಲು ಬೇಕಾದರೆ ಹಿಂಡಿತ್ವವನ್ನೇ ಬಿಡಬೇಕೆಂದೂ, ಮೈಸೂರ ಕಾಂಗ್ರೆಸ್ಸಿಗೆ ಬ್ರಾಹ್ಮಣೇತರರನ್ನು ಗುಲಾಮಗಿರಿಯಲ್ಲಿಡುವ ಉದ್ದಿಶ್ಯವೆಂದೂ, ಗಾಂಧೀ ತತ್ವ ಬ್ರಾಹ್ಮಣ ತತ್ವ ಸಮನ್ವಯವಾಗಿದೆಯೆಂದೂ ಮುಂತಾಗಿ ಹೇಳಿದುವರು.

ಪ್ಯಾರಿಸ್ ಆ 15— ಈ ದಿನ 12-30 ಕ್ಕೆ ಲಾವೆಲ್ಲರನ್ನು ಗುಂಡು ಹೊಡೆದು ಕೊಂದರು. ಅತನ ಕೋರಿಕೆಗೆ ಮಾಜಿಸ್ಟ್ರೇಟರು ಬೆಳಿಗ್ಗೆ ಹೋಗಿ ಮರಣದಂಡನೆಯನ್ನು ಅನುಭವಿಸಬೇಕೆಂದು ತಿಳಿಸಿದರು. ನಂತರ ಲಾವಲ್ಲರು ತಮ್ಮಲ್ಲಿ ಬಚ್ಚಿಟ್ಟುಕೊಂಡಿದ್ದ ವಿಷವನ್ನು ನುಂಗಿ ಸಂಕಟಪಡುತ್ತಾ ಕೆಳಗೆ ಬಿದ್ದರು. ಡಾಕ್ಟರುಗಳು ಪ್ರಾಣ ಉಳಿಸಲು ತುಂಬಾ ಪ್ರಯತ್ನಿಸಲ್ಪಟ್ಟರು. ಪಥಸ್ಥಾನಕ್ಕೆ ಕರೆತಂದಾಗ ತಾನೇ ಗುಂಡು ಹೊಡೆದುಕೊಂಡು ಸಾಯುವೆನೆಂದು ಅವರು ತಿಳಿಸಿದರು. ಆದರೆ ಅನುಮತಿ ದೊರೆಯಲಿಲ್ಲ. ನಂತರ ಗುಂಡು ಹೊಡೆದು ಸಾಯಿಸಲ್ಪಟ್ಟರು.

ಂ ಂ ಂ ಂ

ಇನ್ನು 6 ತಿಂಗಳಲ್ಲಿ ರಷ್ಯಾ ಮತ್ತು ಫ್ರಾನ್ಸು ಅಣುಬಾಂಬ ತಯಾರಿಕೆಯನ್ನು ಪೂರ್ಣಗೊಳಿಸುತ್ತವೆಂದು ಹೇಳಲಾಗಿದೆ. ಖೈದಿಯಾಗಿ ಹಿಡಿಯಲ್ಪಟ್ಟಿರುವ ಜರ್ಮನ್ ರಸಾಯನ ಶಾಸ್ತ್ರಜ್ಞರನ್ನು ಈ ಕಾರ್ಯಕ್ಕೆ ರಷ್ಯನರು ನೇಮಿಸಿರುವರಂತೆ.

ಂ ಂ ಂ ಂ

ಮಧ್ಯ ಭಾರತದಲ್ಲಿ ಕಾಡಿನಲ್ಲಿ ಅಡಗಿಕೊಂಡಿದ್ದ ಭಾರಿ ಡಕಾಯಿತಿಯವರನ್ನು ಹಿಡಿಯಲು ವಿಮಾನಗಳು ಉಪಯೋಗಿಸಲ್ಪಟ್ಟು, 4 ಮಂದಿ ಸತ್ತರು 13 ಮಂದಿ ಗಾಯಗೊಂಡರು.

ಂ ಂ ರಿ ಂ

ಜೈನಾದ ಕೇಂದ್ರ ಸರಕಾರವು ನಾರ್ಕಿಂಗಿಗೆ ವರ್ಗಾಯಿಸಲ್ಪಟ್ಟಿರುವುದು.

————

ಮದರಾಸಿಗೆ ಗಾಂಧೀಜಿ ಬಂದಾಗ ಅವರಿಗೆ ನೂಲಿನ ತುಲಾಭಾರ ನಡೆಸಲು ಗಾಂಧೀಜಿ ಭಕ್ತ ಸಂಘದವರು ಯೋಜನೆ ಮಾಡಿದ್ದಾರೆ

ಂ ಂ

ತುರ್ಕಿ ಗಡಿಯಲ್ಲಿ ರಷ್ಯಾ ಸೈನ್ಯ ಶೇಖರವಾಗುತ್ತಿದೆಯೆಂದೂ, ಟರ್ಕಿ ಸೈನ್ಯ ಸಿದ್ಧತೆ ವ್ಯವಸ್ಥೆಯಾಗಿದೆಯೆಂದೂ ವರದಿ. ಡಾರ್ಡಿನಲ್ಸ್ ರಕ್ಷಣಾ ಕೋಟೆಗಳನ್ನು ರಷ್ಯನ್ನರು ಕೇಳುತ್ತಾರೆ. ಟರ್ಕಿ ಕೊಟ್ಟಿಲ್ಲ.

ಂ ಂ

ಸಿಂಗಪುರದಲ್ಲಿದ್ದ ಜಪಾನೀ ಸೈನಿಕರನ್ನು ಹತ್ತಿರದಲ್ಲಿರುವ ದ್ವೀಪಗಳಿಗೆ ಕಳುಹಿಸಲಾಗುತ್ತಿದೆ. ಅಲ್ಲಿ ಅವರು ವ್ಯವಸಾಯ ಮಾಡಿ ಜೀವಿಸಲು ಅನುಕೂಲ ಪಡಿಸಲಾಗುತ್ತಿದೆ.

ಂ ಂ

ಕಲ್ಕತ್ತಾದ 'ರೂಪಾಳಿ' ಥಿಯೇಟರಿನಲ್ಲಿ ಒಬ್ಬ ಪ್ರೇಕ್ಷಕನ ಮೇಲೆ ಗೋಡೆಯ ಮೇಲೆ ತಗಲುಹಾಕಿದ್ದ ಜಾಹಿರಾತು ಪಟವು ಬಿದ್ದುದ್ದಕ್ಕಾಗಿ ಅತನು ಸಿನಿಮಾ ಕಂಪೆನಿಯ ಮೇಲೆ ಮಾಡಿದ್ದ ವ್ಯವಹಾರದಲ್ಲಿ ಅತನಿಗೆ ಕಂಪೆನಿಯವರು ರೂ. 5450 ಪರಿಹಾರದ್ರವ್ಯ ಕೊಡುವಂತೆ ಹೈಕೋರ್ಟಿನವರು ಆಜ್ಞೆ ಮಾಡಿದ್ದಾರೆ.

ಅಹಮದಾಬಾದ್ ಆಜಾದ್ ಮುಸ್ಲಿಂ ಸಭೆಯಲ್ಲಿ ಕಲ್ಲುಗಳು ಎಸೆದಾಡಲ್ಪಟ್ಟವು. ಪೋಲೀಸ್ ಇನ್‌ಸ್ಪೆಕ್ಟರಿಗೂ ಮತ್ತಿತರ 12 ಮಂದಿಗೂ ಗಾಯವಾಗಿದೆ.

ಂ ಂ

ಭಾರತದ ಮುಂದಿನ ಕಾನೂನು ಭಂಗ ಬಳವಳದಲ್ಲಿ ಭಾರತೀಯ ಸೈನಿಕರೂ ಸೇರಬಹುತೆಂದು ಒಬ್ಬ ಬ್ರಿಟಿಷ್ ಅಧಿಕಾರಿಯು ಎಚ್ಚರಿಕೆ ಕೊಟ್ಟಿರುವನು.

ಂ

ಹೈಫಾದಲ್ಲಿ ಕಾನೂನಿಗೆ ವಿರುದ್ಧವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದವೆಂಬ ಅಪಾದನೆಗಾಗಿ 18 ಮಂದಿ ಯಹೂದ್ಯ ಯುವಕರೂ ಇಬ್ಬರು ಯುವತಿಯರಿಗೂ ತಲಾ 3 ವರ್ಷ ಕಠಿಣ ಸಜೆಯಾ ವಿಧಿಸಲಾಗಿದೆ.

ಂ ಂ

ಬ್ರಿಟನ್ನಿನಲ್ಲಿ ಕಾರ್ಮಿಕರ ಸೊಂಪು ಇನ್ನೂ ನಿಂತಿಲ್ಲ.

ಂ ಂ

ಟೋಕಿಯೋ— ಜಪಾನಿನಲ್ಲಿ ಅಹಾರಾಭಾವವನ್ನು ತೋರ್ಪಡಿಸಲು ಮುರು ಸಾವಿರ ಮಂದಿ ಜಪಾನೀಯರು ರಸ್ತೆಗಳಲ್ಲಿ ಪ್ರದರ್ಶನ ನಡೆಸಿ ಅಲ್ಲಿನ ನಗರ ಉಧ್ಯಾನವನದಲ್ಲಿ ಭಾರಿ ಸಭೆ ಜರುಗಿಸಿದರು.

ಪ್ರಜಾಪ್ರತಿನಿಧಿ ಸಭೆ

ಮೈಸೂರು, ಆ 20 — ಪ್ರಧಾನ ಶಿರೋಮಣಿ ಎಚ್ ಮಾಧವರಾಯರ ಅಧ್ಯಕ್ಷತೆಯಲ್ಲಿ ಈ ದಿವಸದ ಸಭೆಯು ಪ್ರಶ್ನೋತ್ತರಗಳಿಂದ ಆರಂಭವಾಯಿತು.

ಪ್ರಶ್ನೋತ್ತರ ಕಾಲದಲ್ಲಿ ವಿ॥ಮಲ್ಲರಾಧ್ಯರು ಶ್ರೀ ಖಲೀಲರವರ ಪ್ರಶ್ನೆಗೆ ಉತ್ತರವಾಗಿ ' ಮೈಸೂರು ನಗರದ ಹಳೆಯ ಭಾಗವನ್ನು ಅಭಿವೃದ್ಧಿ ಪಡಿಸುವ ವಿಷಯದಲ್ಲಿ ನಿರ್ದಿಷ್ಟವಾದ ಯೋಚನೆಯಿಲ್ಲ. ಮನೆ ಹತೋಟಿ ಆಜ್ಞೆ ಹೊರಟಾಗಿನಿಂದ ಒಟ್ಟು ಎಂಟು ಮನೆಗಳನ್ನು ವಶಪಡಿಸಿಕೊಳ್ಳಲಾಗಿದೆ ' ಎಂದರು.

ಶ್ರೀ ಪಾವುಗಡ ಸಂಜುಂಡರಾಯರು ಡಾ. ಶಿವರಾಜರವರ ಭಾಷಣವನ್ನು ಕುರಿತು ಅವಸರದ ಠರಾವೊಂದನ್ನು ಮಂಡಿಸಿದ್ದನ್ನು ಅಧ್ಯಕ್ಷರು ನಿರಾಕರಿಸಿದರು. ಇದರ ಸಲುವಾಗಿ ಐದು ನಿಮಿಷಗಳಕಾಲ ಸಭಾತ್ಯಾಗ ಮಾಡಿದರು.

ರೇಷ್ಮೆ ಹತೋಟಿ ಆಜ್ಞೆಯು ಬಂದ ನಂತರ ಇದುವರೆಗೆ 556187 ಪೌಂಡುಗಳಷ್ಟು ಜಾರಕಾ ರೇಷ್ಮೆ ಡಿಫೋಗಳಿಗೆ ಬಂಧವು ; 515161 ಪೌಂಡುಗಳನ್ನು ಹರಾಜು ಮಾಡಲಾಗಿ 10760183 ರೂ. ಗಳುಬಂದವೆಂದು ಶ್ರೀ ಮಲ್ಲರಾಧ್ಯರು ಉತ್ತರಿಸಿದ್ದರು.

ಸಂಸ್ಥಾನದಲ್ಲಿ ಪ್ರತಿಯೊಬ್ಬ ಜಮೀನುದಾರನಿಗೂ, ನೀರಾವರಿ ಸೌಕರ್ಯಗಳು ವಿದ್ಯುತ್ತು ಯಂತ್ರದ ನೇಗಿಲೂ ರಿಯಾಯಿತಿ ದರದಲ್ಲಿ ದೊರೆಯುವಂತೆ ಸರ್ಕಾರದವರು ಒಂದು ಯೋಜನೆಕೈಗೊಳ್ಳಬೇಕೆಂದು ಶ್ರೀ ಅಣ್ಣಪ್ಪರೆಡ್ಡಿಯವರಿಂದ ಇಡಲ್ಪಟ್ಟಿದ್ದ ಠರಾವು ತೀವ್ರ ಚರ್ಚೆಯಾಗಿ, ಸರ್ಕಾರವು ಅನುಮೋದಿಸುವುದಾಗಿ ತಿಳಿಸಿತು.

ಸಭೆಯು ಮಂಗಳವಾರದವರೆಗೆ ನಡೆಯುವುದು. ಮಂಗಳವಾರದ ದಿವಸ ಪ್ರಿವಿಲೇಜಸ್ ಮೂದಿ ಚರ್ಚೆಗೆ ಒಪ್ಪುವುದು. ಮೂಲರಸೆ ಅಧಿವೇಶನ ನಡೆಸುವ ಬಗ್ಗೆ ಅಧ್ಯಕ್ಷರು ಆಲೋಚಿಸುವುದಾಗಿ ತಿಳಿಸಿದರು. ಹೆಲ್ತ್ ಕಮಿಟಿ ಜನರಾವಣಾ ಪ್ರಶ್ನೆಯನ್ನು ಸಭೆಯ 5-20 ಕ್ಕೆ ಮುಂಡಿಯಿತು.

ಶಾರದಾವಿಲಾಸ ಶಾಲೆಯ ಸ್ಥಿಪಕರೆ ಪ್ರಧಾನ ಶಿರೋಮಣಿ ಮಾಧವರಾಯರು ಒಂದು ಸಾವಿರ ರೂ. ಬಿದಾರದಾನ ಮಾಡಿದ್ದಾರೆ.

ವಿವಿಧ ವರ್ತಮಾನ

ಪ್ರಾಂತ ಸರಕಾರಗಳು ಇಷ್ಟಪಟ್ಟಲ್ಲಿ ವಾರ್ ಅಲೋಯನ್ಸನ್ನು ರದ್ದುಮಾಡಬಹುದೆಂದು ಭಾರತ ಸರಕಾರವು ಸೂಚಿಸಿದೆ.

ಂ ಂ

ಇಂಡೋಚೀನಾದ ರಾಷ್ಟ್ರೀಯ ದೊಡನೆ ಸಂಧಾನ ನಡೆಸಲು ಫ್ರೆಂಚ್ ಸರಕಾರವು ಇಬ್ಬರು ಕಮಿಷನರನ್ನು ನೇಮಿಸಿದೆ.

ಂ ಂ

ಪ್ಯಾಲಿಸ್ಟೈನಿನ ಬಗ್ಗೆ ಯಹೂದ್ಯ ಮತ್ತು ಅರಬ್ ಮುಖಂಡರೊಡನೆ ಸಮಾಲೋಚನೆ ನಡೆಸದೆ ಯಾವ ಕೊನೆಯ ಕ್ರಮವನ್ನೂ ಅಮೇರಿಕಾ ಸರಕಾರವು ಅನುಮೋದಿಸುವುದಿಲ್ಲವೆಂದು ಸ್ಟೇಟ್ ಸಕ್ರಿಟರಿಯವರು ಹೇಳಿರುವರು.

ಂ ಂ

ಚನ್ನಗಿರಿಯಲ್ಲಿ ಕಳೆದ ತಾ | 13 ರಲ್ಲಿ ಬೆಳಿಗ್ಗೆ 7 ರಿಂದ 9 ರವರೆಗೆ ಗಂಟೆಯವರೆಗೆ ಆಕಾಶದಲ್ಲಿ ಸೂರ್ಯನ ಉತ್ತರಕ್ಕೆ ಪ್ರತಿ ಸೂರ್ಯನಂತೆ ಪ್ರಕಾಶವಾಗಿಯೂ ದುಂಡಾಗಿಯೂ ಕಾಣಬಂದುದಲ್ಲದೆ ಅದರಿಂದ ಬೆಳುಪಾದ ಬಾಲದಂತೆ ಮೋಡವು ಕಾಣಿಸಿತೆಂದೂ ಮುಂತಾಗಿ ಬೆಂಗಳೂರಿನ ಪತ್ರಿಕೆಯೊಂದಕ್ಕೆ ಒಬ್ಬ ಬಾತ್ಮೀದಾರರು ತಿಳಿಸಿರುತ್ತಾರೆ.

ಂ ಂ

ಜುಂಕಿಂಗಿನ ವಾರ್ತೆಯಂತೆ, ಜನರಲಿಸ್ಮೊ ಚಿಯಾಂಗ್ ಕೈಷೇಕರು ಕೈಗೊಳ್ಳಲಿರುವ ಅಮೇರಿಕಾ, ಬ್ರಿಟಿಷ್, ರಷ್ಯಾ ಮತ್ತು ಫ್ರಾನ್ಸುಗಳನ್ನು ಭೇಟಿ ಮಾಡುವ ಪ್ರವಾಸದಲ್ಲಿ ಅವರ ಪತಿಯವರೂ ಅವರ ಜೊತೆಯಲ್ಲಿ ಹೋಗುವರೆಂದು ಹೇಳಲಾಗಿದೆ.

ಂ ಂ

ಈ ವಸಂತ ಕಾಲದಲ್ಲಿ ಮೈಸೂರಿನಲ್ಲಿ ಎರಡೂವರೆ ಸಾವಿರ ಪಲ್ಲ ಅಕ್ಕಿ ಖರ್ಚಾಗಿರುವುದಾಗಿ ತಿಳಿಯಬಂದಿದೆ

ಂ ಂ

ಇಂಡಿಯನ್ ನಾಷನಲ್ ಆರ್ಮಿಯವರಲ್ಲಿ ಸುಮಾರು 30 ಮಂದಿ ಮಾತ್ರ ವಿಚಾರಣೆಗೆ ಗುರಿಪಡಿಸಲಾಗುವದೆಂದೂ ಬಹು ಮಂದಿಗ ಕಮಾಂಡ್ ತೊರಿಸಲಾಗುವುದೆಂದೂ ಡೆಲ್ಲಿಯ ವರ್ತಮಾನ.

ಂ ಂ

ರಷ್ಯಾದಲ್ಲಿ ವರ್ಷಕ್ಕೆ 1 ಲಕ್ಷ ಮನೆಗಳನ್ನು ಕಟ್ಟುವ ಯೋಜನೆ ನಡೆದಿದೆ. ನಾಜೀ ಹಾವಳಿಯಿಂದ ಬಿದ್ದಿಯ ಮನೆಗಳು ಹಾಳಾಗಿ ಹೋಗಿರುವವು.

ಜಾವಾದಲ್ಲಿ ಭೀಕರ ಕೃತ್ಯಗಳು ನಡೆದಿವೆ. ಸುರರಂಗದಲ್ಲಿನ 30 ಸಾವಿರ ಹೆಂಗಸರು ಮಕ್ಕಳು ಜೈಲಿನಲ್ಲಿದ್ದಾರೆ ಬಟಾವಿಯಾಕ್ಕೆ 20 ಮೈಲಿ ದೂರದಲ್ಲಿನ ಒಂದು ನಗರದಲ್ಲಿನ ಎಲ್ಲಾ ಮನೆಗಳೂ ಸುಟ್ಟು ಬೂದಿಯಾಗಿವೆ.

ಂ ಂ

ಜರೂಸೆಲಂ ನಗರವನ್ನು ಅರಬ್ಬಿಯರು, ಯಹೂದ್ಯರು ಮತ್ತು ಕ್ರಿಶ್ಚಿಯನ್ನರು ವಿಭಾಗಿಸಿಟ್ಟಿರುವರು ಮುನಿಸಿಪಾಲಿಟಿ ಸ್ಥಾಪಿಸುವ ಯೋಜನೆ ನಡೆದಿದೆ.

ಂ ಂ

ಅಟ್ಲಾಂಟಿಕ್ ಮತ್ತು ಪೆಸಿಫಿಕ್ಕಿನಲ್ಲಿರುವ ಕೆಲವು ಬ್ರಿಟಿಷ್ ಮತ್ತು ಫ್ರೆಂಚ್ ಸ್ವಾಸ್ಥ್ಯಗಳನ್ನು ಅಮೇರಿಕಾ ಪಡೆಯಲು ರಹಸ್ಯವಾಗಿ ಸಂಧಾನ ನಡೆಸಲಾಗುತ್ತಿದೆಯೆಂದು ಹೇಳಲಾಗಿದೆ.

ಚಾರಿತ್ರಿಕ ವಿಷಯ

ಫಕೀರನ ಶಾಪ

1869 ರಲ್ಲಿ ನವಶೇರಾಕ್ಕೆ 5 ನೆ ಬಂಗಾಳಾ ಅಶ್ವಪಡೆಯು ಒಂದಾಗ ನಾಲ್ಕು ಮಂದಿ ಬ್ರಿಟಿಷ್ ಅಧಿಕಾರಿಗಳಿಗೆ ಸ್ಥಳ ಸಾಲದ್ದರಿಂದ, ಕ್ಯಾಪ್ಟನ್ ಆಂಡರ್‌ಸನ್ ಮತ್ತಿತರರು ಮನೆ ಕಟ್ಟಿಕೊಳ್ಳಲು ಸ್ಥಳಕ್ಕೆ ಅನುಮತಿ ಪಡೆದರು ಅವರು ಮನೆ ಕಟ್ಟಿಕೊಳ್ಳಬೇಕೆಂದ ಸ್ಥಳದಲ್ಲಿ ಒಬ್ಬ ಹಿಂದೂ ಫಕೀರನಿದ್ದನು. ಅವನನ್ನು ಅಜೆಗೊಡಿಸಿದಾಗ, ಅವನು ಇವರನ್ನು ಕುರಿತು ' ನೀವೂ ಮತ್ತು ನಿಮ್ಮ ವಂಶವೂ 7 ವರ್ಷಗಳಲ್ಲಿ ನಾಶವಾಗಲಿ ' ಎಂದು ಶಾಪವಿತ್ತನು. ಹಾಗೇ ಆಯಿತು !

Edited, Printed and published by M. S. Krishna Rao, at the Satvavadi Press, Chamaraja Agrahar, Mysore

ರಕ್ತ ವೃದ್ಧಿಗೆ — ಧಾತು ಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೧೬೭ ಚಾಮರಾಜಪುರಂ ಮೈಸೂರು.